# ನವಿಲುಗನ್ನಡಿ




- ಆಗಸ್ಟ್ ಸಂಚಿಕೆಯ ವೈವಿಧ್ಯಮಯ ಬರಹಗಳು ಖುಷಿ ನೀಡಿದವು. ಅಮೆರಿಕದ ಲೇಖಕಿ ಮಾಯಾ ಏಂಜೆಲೊ ಅವರ ಸಂದರ್ಶನ 'ಅಂತರಾಳದ ದನಿಗೆ ಭಾಷೆಯ ದೀವಿಗೆ' (ಕನ್ನಡಕ್ಕೆ: ಹೇಮಾ ಎಸ್.) ಗಮನ ಸೆಳೆಯಿತು. 'ವಜ್ರವಾಗಲು ಹೆಚ್ಚು ಸಮಯ, ಒತ್ತಡ ಎರಡನ್ನೂ ತಡೆದುಕೊಳ್ಳಬೇಕು' ಎಂಬ ಮಾಯಾ ಅವರ ನುಡಿ ಅದೆಷ್ಟು ಸತ್ಯವಲ್ಲವೆ?

**ಬಿ.ಆರ್. ಅಣ್ಣಾಸಾಗರ, ಸೇಡಂ**

- ನಾನು ಇಲ್ಲಿಯವರೆಗೆ ಓದಿರುವ ಸಂದರ್ಶನಗಳಲ್ಲಿ ಇದು ಅತ್ಯುತ್ತಮವಾದದ್ದು. ಅದರ ಅನುವಾದವೂ ಚೆನ್ನಾಗಿದೆ. ಮಾಯಾ ಏಂಜೆಲೋ ಅವರ ಇಡೀ ಬರಹಗಳನ್ನು ಓದಿ ತಿಳಿದುಕೊಳ್ಳಬಹುದಾದ ಸಂಗತಿಗಳನ್ನು ಅವರ ಒಂದು ಸಂದರ್ಶನ ತೆರೆದಿಡುತ್ತದೆ.

**ಎ.ಎಸ್. ಪ್ರಭಾಕರ, ಹೊಸಪೇಟೆ**

- ಮಾಯಾ ಏಂಜೆಲೊ ಅವರ ಅಂತರಾಳದ ಮಾತುಗಳು, ನೋವು, ಸಹನೆ, ಧೈರ್ಯ, ಜೀವಪರ ಚಿಂತನೆ, ಭಾಷಾ ಪ್ರೇಮ ಇಷ್ಟವಾಯಿತು. ಕೇಶವರೆಡ್ಡಿ ಹಂದ್ರಾಳರ ನೀಳ್ಗತೆ ತೇಜಸ್ವಿಯವರ 'ಅಬಚೂರಿನ ಪೋಸ್ಟಾಫೀಸು' ಕತೆಯನ್ನು ನೆನಪಿಸಿತು.

**ಎಂ.ಜಿ. ರಂಗಸ್ವಾಮಿ, ಹಿರಿಯೂರು**

- ಮಾಯಾ ಏಂಜೆಲೊ ಅವರ ಸಂದರ್ಶನ ಬಹಳ ಆಪ್ತವಾಗಿದೆ. ಕವಿ ಸಿದ್ಧಲಿಂಗಯ್ಯನವರ ಕುರಿತ ನಟರಾಜ್ ಹುಳಿಯಾರರ ಲೇಖನ (ಕವಿ ಸಿದ್ಧಲಿಂಗಯ್ಯ: ಕನ್ನಡ ಸಂಸ್ಕೃತಿಯ ಅಪೂರ್ವ ಆಸ್ಫೋಟ) ಅತ್ಯುತ್ತಮವಾಗಿದೆ. ಈವರೆಗೆ ಪ್ರಕಟವಾಗಿರುವ ಸಿದ್ಧಲಿಂಗಯ್ಯನವರ ಕುರಿತಾದ ಲೇಖನಗಳಲ್ಲಿ ಇದು ಸಮಗ್ರ ಮತ್ತು ಪರಿಪೂರ್ಣ ಎನಿಸಿತು.

**ಲಲಿತಾ ಸಿದ್ಧಬಸವಯ್ಯ, ಪದ್ಮಾ ಸಿ., ಬೆಂಗಳೂರು**

- 'ಒಂದಕ್ಕಂಜುವರಯ್ಯಾ...' ಮಲ್ಲಿಕಾರ್ಜುನ ಹುಲಗಬಾಳಿ ಅವರ ಪ್ರಬಂಧ ಸ್ವಾರಸ್ಯಕರವಾಗಿತ್ತು. ವಿವಿಧ ಸನ್ನಿವೇಶಗಳಲ್ಲಿ 'ನಿಸರ್ಗ ಕರೆ'ಯಿಂದ ಉಂಟಾಗುವ ಪಡಿಪಾಟಲನ್ನು ಹೌದೌದೆನ್ನುವಂತೆ ಕಟ್ಟಿಕೊಟ್ಟಿದ್ದಾರೆ.

**ಗಿರೀಶ ಸೊಲ್ಲಾಪುರ, ಬೀಳಗಿ**

- ಕೇಶವರೆಡ್ಡಿ ಹಂದ್ರಾಳರ ನೀಳ್ಗತೆ 'ಪಂಚಾಲಯ್ಯನ ಪೆನ್ಷನ್ ಫೈಲು' ವ್ಯವಸ್ಥೆಯ ವಿವಿಧ ಮಜಲುಗಳನ್ನು ಮನಮುಟ್ಟುವಂತೆ ಚಿತ್ರಿಸಿದೆ.

**ಬಿ.ಎಚ್. ಜಯದೇವ್, ಬೆಂಗಳೂರು**

- ಆಗಸ್ಟ್ ಸಂಚಿಕೆಯಲ್ಲಿ ಪ್ರಕಟವಾದ ಪಿ.ಬಿ. ಪ್ರಸನ್ನ ಅವರ ಕತೆ 'ನಿರ್ವಾಣ' ಈಗಾಗಲೇ 03 ಜೂನ್ 2021ರ 'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗಿದೆ. ಈ ಪುನರಾವರ್ತನೆ ಅನಗತ್ಯವಾಗಿತ್ತು.

**ಶಂಸ ಐತಾಳ, ಬೆಂಗಳೂರು**

**(ಈ ಪ್ರಮಾದಕ್ಕೆ ವಿಷಾದಿಸುತ್ತೇವೆ -ಸಂ)**